ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/41/ಆಂತರಿಕ ಪರೀಕ್ಷಾ ಅಂಕ/2023-24 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು - 560001.
ದಿನಾಂಕ: 03.07.2023.

**<u>ಸುತ್ತೋಲೆ</u>**

**<u>ವಿಷಯ:</u>** ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಆಂತರಿಕ ಪರೀಕ್ಷಾ ಅಂಕಗಳಿಗೆ ನಿರ್ದಿಷ್ಟ ಸ್ವರೂಪ ನೀಡುವ ಕುರಿತು.

*****

**<u>ಪರಿಚಯ:</u>** ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳ ಪ್ರಗತಿಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವ ಮೂಲಕ ಕಲಿಕೆಯ ಗುಣಮಟ್ಟವನ್ನು ವರ್ಧಿಸಲು ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಆಂತರಿಕ ಪರೀಕ್ಷೆಗಳನ್ನು (Internal Examinations) ರಚನಾತ್ಮಕ ಮೌಲ್ಯಮಾಪನ (Formative Assessment)ದ ಆಧಾರದ ಮೇಲೆ ನಡೆಸಲು ಉದ್ದೇಶಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ತರ್ಕಬದ್ಧವಾಗಿ ಆಲೋಚಿಸುವ ಸಾಮರ್ಥ್ಯವನ್ನು ಬೆಳೆಸಲು ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು ಪ್ರಗತಿಪರವಾಗಿರಬೇಕು, ಸಾಧ್ಯವಾದ ಮಟ್ಟಿಗೆ ಆನ್ವಯಿಕ ಪ್ರಶ್ನೆಗಳನ್ನು ಒಳಗೊಂಡಿರಬೇಕು, ಸಮಸ್ಯೆಗಳ ಪರಿಹಾರಕ್ಕಾಗಿ ಪರಿಕಲ್ಪನೆಗಳನ್ನು ಅನ್ವಯಿಸಬಲ್ಲ ಸಾಮರ್ಥ್ಯವನ್ನು ಮಾಪನ ಮಾಡುವಂತಿರಬೇಕು, ಕೋರ್ಸ್‌ನ ಫಲಿತಗಳನ್ನು ಪ್ರೋಗ್ರಾಂ ಫಲಿತಗಳ ಮೂಲಕ ಬಿಂಬಿಸುವಂತಿರಬೇಕು ಹಾಗೂ ಹಲವು ದೃಷ್ಟಿಕೋನಗಳಿಗೆ ಅವಕಾಶ ಕಲ್ಪಿಸುವಂತಿರಬೇಕು. ಈ ಎಲ್ಲ ಅಂಶಗಳನ್ನು ಒಳಗೊಂಡಿರುವ ಆಂತರಿಕ ಮೌಲ್ಯಮಾಪನ ಪರೀಕ್ಷಾ ಪದ್ಧತಿಯನ್ನು ರೂಢಿಗೆ ತರಲು ಮಾರ್ಗಸೂಚಿಗಳನ್ನು ಹಾಗೂ ಸಮಯರೇಖೆಗಳನ್ನು ಸಿದ್ಧಪಡಿಸಲಾಗಿದೆ.

****

ಪದವಿ ಶಿಕ್ಷಣದಲ್ಲಿ ಪ್ರತಿ ಸೆಮಿಸ್ಟರ್‌ನ ಪ್ರತಿ ವಿಷಯದಲ್ಲಿನ ಆಂತರಿಕ ಪರೀಕ್ಷೆಗಳಿಗೆ ಒಟ್ಟು 40 ಅಂಕಗಳು ನಿಗದಿಯಾಗಿದ್ದು, ಪ್ರತಿ ವಿದ್ಯಾರ್ಥಿಗೆ ಈ ಅಂಕಗಳನ್ನು ನೀಡಲು ಅಗತ್ಯವಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳು ಹಾಗೂ ಸಮಯರೇಖೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧಗಳು- 1, 2, 3 ಮತ್ತು 4 ರಲ್ಲಿ ನೀಡಲಾಗಿದ್ದು, ಈ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಲಾಗಿದೆ.

- ಈ ಮಾರ್ಗಸೂಚಿಗಳನ್ನು ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ **2023-24ನೇ ಸಾಲಿನಿಂದ ಜಾರಿಗೊಳಿಸುವುದು**
- ಪ್ರತಿ ಸೆಮಿಸ್ಟರ್‌ನಲ್ಲಿ ಪ್ರತಿ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಪಡೆಯುವ ಒಟ್ಟು ಆಂತರಿಕ ಪರೀಕ್ಷಾ ಅಂಕಗಳು ಈ ಕೆಳಗಿನಂತಿರುತ್ತವೆ.

  ಒಟ್ಟು ಆಂತರಿಕ ಪರೀಕ್ಷಾ ಅಂಕಗಳು = ಅಸೈನ್ಮೆಂಟ್ ಅಂಕಗಳು+ ಟೆಸ್ಟ್ ಅಂಕಗಳು+ ಸೆಮಿನಾರ್ ಅಂಕಗಳು+ಕೇಸ್ ಸ್ಟಡಿ/ಫೀಲ್ಡ್ ವಿಸಿಟ್/ಪ್ರಾಜೆಕ್ಟ್ ಅಂಕಗಳು
- ಅನುಬಂಧಗಳಲ್ಲಿ ನೀಡಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಆಂತರಿಕ ಪರೀಕ್ಷೆಗಳ ಮೇಲ್ವಿಚಾರಣೆಯನ್ನು ನಡೆಸುವ ಹೊಣೆಗಾರಿಕೆ ಕ್ರಮವಾಗಿ ಪ್ರಾಂಶುಪಾಲರು, ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಆಯುಕ್ತಾಲಯದ ಜಂಟಿ ನಿರ್ದೇಶಕರು (ಶೈಕ್ಷಣಿಕ) ರವರದ್ದಾಗಿರುತ್ತದೆ.

ಆಯುಕ್ತರು ಪ್ರತಿ ತಿಂಗಳ 16ನೇ ತಾರೀಖಿನಂದು ಪ್ರಾದೇಶಿಕ ವರದಿಗಳ ಪರಿಶೀಲನೆ ನಡೆಸಿ, 17ನೇ ತಾರೀಖಿನಂದು ಪ್ರಾದೇಶಿಕ ಮಟ್ಟದ ಸಭೆಗಳನ್ನು ಕರೆದು ಪ್ರಗತಿ ಪರಿಶೀಲನೆಯನ್ನು ನಡೆಸುತ್ತಾರೆ.

**ಅಡಕಗಳು:**
ಅನುಬಂಧಗಳು- 1, 2, 3 ಮತ್ತು 4

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

**ಇವರಿಗೆ:**

1. ಜಂಟಿ ನಿರ್ದೇಶಕರು (ಶೈಕ್ಷಣಿಕ), ಕಾಶಿಇ, ಬೆಂಗಳೂರು- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲ್ಬುರ್ಗಿ- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
4. ಮಾಹಿತಿ ತಂತ್ರಜ್ಞಾನಾಧಿಕಾರಿಗಳು – ವೆಬ್ ಸೈಟಿನಲ್ಲಿ ಪ್ರಕಟಿಸುವುದಕ್ಕಾಗಿ
5. ಕಚೇರಿ ಪ್ರತಿ